

## ಶಾಗ್ಗಿ ಶೋಲ್ಡರ್

ಜಲ ಸಸ್ಯಗಳಲ್ಲೇ ತುಂಬಾ ವಿಶೇಷವಾದ ಸಸ್ಯವು ನೀರಿನ ಮೇಲೆ ನೆಟ್ಟಗೆ ಬೆಳೆಯುತ್ತದೆ. ಬಹಳ ವಿಸ್ತಾರವಾಗಿ ಹರಡುವ ಇದರ ಬುಡದ ಬಳಿ ದಪ್ಪನಾಗಿದ್ದರೆ, ಕಾಂಡವು ಮೇಲಕ್ಕೇರಿದಂತೆಲ್ಲಾ ಕಿರಿದಾಗಿ ಎಳೆಯಂತಾಗಿರುತ್ತದೆ. ಸುಮಾರು ಕಾಲು ಇಂಚಿನಷ್ಟು ಗಾತ್ರದ ಚಿನ್ನದ ಬಣ್ಣದ ಹೂ ಬಿಡುವ ಇದರ ಎಲೆಗಳು 2.5 ಇಂಚಿನಷ್ಟು ಉದ್ದ ಮತ್ತು 2 ಇಂಚಿನಷ್ಟು ಅಗಲವಾಗಿರುತ್ತವೆ. ಸರಿಸುಮಾರು 70 ಜಾತಿಗಳನ್ನು ಹೊಂದಿರುವ ಈ ಜಲಸಸ್ಯವು ನದಿ, ಸರೋವರ, ತೊರೆ ಮತ್ತು ತೀರಗಳಲ್ಲಿ ಕಂಡುಬರುತ್ತದೆ.

–ಪ.ನಾ.ಹಳ್ಳಿ ಹರೀಶ್ ಕುಮಾರ್

## ಬೆಟ್ಟದಲ್ಲೊಂದು ಚಿರತೆ ಬೋನು!

ಕೋಲಾರ ಜಿಲ್ಲೆಯ ಅರಾಭಿಕೊತ್ತನೂರು ಗ್ರಾಮದ ಆಸುಪಾಸು ಬೆಟ್ಟಗಳಿಗೇನೂ ಕೊರತೆಯಿಲ್ಲ. ಹಾಗೆಯೇ ಚಿರತೆಗಳಿಗೂ. ಗ್ರಾಮದಲ್ಲಿ ರಥೋತ್ಸವ ಕಾರ್ಯಕ್ರಮ ನಡೆಯುವಾಗ ಬೆಟ್ಟ ಗುಡ್ಡದಲ್ಲಿರುವ ಚಿರತೆಯನ್ನು ಸೆರೆ ಹಿಡಿದು ಬೋನಿನಲ್ಲಿಟ್ಟು ಮೆರವಣಿಗೆ ಮಾಡುವುದು ವಾಡಿಕೆ. ಅದರ ವೀಕ್ಷಣೆಗೆ ಸುತ್ತಮುತ್ತಲ ನೂರಾರು ಗ್ರಾಮದ ಜನರು ಸೇರುತ್ತಿದ್ದರು. ಆದರೆ ಅರಣ್ಯಾ ಇಲಾಖೆಯ ನಿಯಮಗಳು ಕಠಿಣವಾಗುತ್ತಿದ್ದಂತೆ ವಾಡಿಕೆ ಸ್ಥಗಿತಗೊಂಡಿದೆ.

ಉತ್ಸವದ ಮೆರವಣಿಗೆಗೆ ಚಿರತೆ ಸೆರೆಹಿಡಿಯಲು ನೂರಾರು ವರ್ಷಗಳಿಂದ ಇಲ್ಲಿನ ಗ್ರಾಮಸ್ಥರು ಸುಲಭವಾದ ಉಪಾಯವನ್ನು ಮಾಡಿಕೊಂಡಿದ್ದರು. ಸೆರೆಹಿಡಿಯಲು ಬೆಟ್ಟದಲ್ಲಿ ದೊಡ್ಡ ದೊಡ್ಡ ಬಂಡೆಗಳನ್ನು ಬಳಸಿ ಗುಹೆಯ ಪ್ರತಿರೂಪವನ್ನು ಕೃತಕವಾಗಿ ನಿರ್ಮಿಸಲಾಗಿತ್ತು. ಅದರೊಳಗೆ ಮನುಷ್ಯನೊಬ್ಬ ಹೋಗಲು ಹಾಗೂ ಒಳ ಹೋಗಿ ಆಚೆ ಬರುವಷ್ಟು ಜಾಗವಿರುತ್ತದೆ. ಒಂದು ಕಡೆ ದ್ವಾರ ತೆರೆದಿರುತ್ತದೆ. ಚಿರತೆ ಆ ಗುಹೆಯನ್ನು ಪ್ರವೇಶಿಸುತ್ತಿದ್ದಂತೆ ದ್ವಾರವನ್ನು ಮುಚ್ಚಲು ಬಂಡೆಗಳ ಮೇಲೆ ಹಲಗೆಯೊಂದನ್ನು ಇರಿಸಲಾಗುತ್ತಿತ್ತು.

ಚಿರತೆಯನ್ನು ಗುಹೆಯೊಳಗೆ ಸೆಳೆಯಲು ಅದರೊಳಗೆ ಚಿಕ್ಕ ಮೇಕೆ ಅಥವಾ ಕುರಿ ಮರಿಯನ್ನು ಕಟ್ಟುತ್ತಿದ್ದರು. ಅದರ ಅರಚುವ ಶಬ್ದ ಕೇಳಿ ರಾತ್ರಿ ವೇಳೆ ಚಿರತೆ ಗುಹೆಯೊಳಗೆ ಪ್ರವೇಶಿಸುತ್ತಿತ್ತು. ಆಗ ದ್ವಾರದ ಅಡ್ಡಲಾಗಿ ಹಲಗೆ ಬಿದ್ದು ಚಿರತೆ ಲಾಕ್ ಆಗುತ್ತಿತ್ತು. ಬೆಳಿಗ್ಗೆ ಸ್ಥಳಕ್ಕೆ ಬರುತ್ತಿದ್ದ ಗ್ರಾಮಸ್ಥರು ಗುಹೆಯ ದ್ವಾರಕ್ಕೆ ಬೋನು ಇಟ್ಟು ಅದರೊಳಕ್ಕೆ ಚಿರತೆಯನ್ನು ಎಳೆದುಕೊಂಡು ಉತ್ಸವದ ವೇಳೆ ಅದನ್ನು ಮೆರವಣಿಗೆ ಮಾಡುತ್ತಿದ್ದರು. ಚಿರತೆ ಸೆರೆಗೆ ಅಸ್ತ್ರವಾಗಿ ಕಟ್ಟುತ್ತಿದ್ದ ಮೇಕೆ ಅಥವಾ ಕುರಿ ಮರಿಯನ್ನು ಕಳ್ಳರು ರಾತ್ರೋರಾತ್ರಿ ಬಿಚ್ಚಿಕೊಂಡು ಹೋಗುತ್ತಿದ್ದದ್ದೂ ಉಂಟು.

–ಅಪ್ಪು, ಕೋಲಾರ



### ನೀವೂ ಬರೆಯಿರಿ

'ಸುಧಾ' ವಾರ ಪತ್ರಿಕೆಯಲ್ಲಿ ಪ್ರಕಟವಾಗುವ ನಿಮ್ಮಪುಟ ಓದುಗರ ಅಂಕಣ. ನಿಮ್ಮ ಸುತ್ತಮುತ್ತಲಿನ ವಿಶೇಷತೆಯ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.
ವಿಳಾಸ: editorsu@sudha.co.in

@SudhaWeekly